<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 615/2015 ಸಿಡಬ್ಲೂ: 5 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 26-12-2024

ಹೆಸರು : ಬಾಬು

ತಂದೆ ಹೆಸರು : ನಾಗಪ್ಪ

ವಯಸ್ಸು : 53 ವರ್ಷ

ಉದ್ಯೋಗ : ಎ.ಎಸ್.ಐ. ಚಿತ್ತಾಪುರ ಪೊಲೀಸ ಠಾಣೆ

ವಾಸಸ್ಥಳ : ಚಿತ್ತಾಪುರ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ಸನ್ 2011 ರಿಂದ 2017 ರವರೆಗೆ ಸೇಡಂ ಪೊಲೀಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಹೀಗಿರುವಾಗ ದಿಃ 24-12-2013 ರಂದು ನಾನು ಮತ್ತು ಚಾಸಾ-4 ರವರು ಪೊಲೀಸ ಠಾಣೆ ಕರ್ತವ್ಯದಲ್ಲಿದಾಗ ಚಾಸಾ-10 ರವರು ಕರ್ನಾಟಕ ಪ್ರಪೌರವಿಸನಲ್ ಜನರಲ ಸೌಟರ ಅಂಗಡಿಯಲ್ಲಿ ನಕಲಿ ಜಂಡುಬಾಂಬ ತನ್ನ ಅಂಗಡಿಯಲ್ಲಿ ಇಟ್ಟುಕೊಂಡು ಅವುಗಳನ್ನು ವ್ಯಾಪಾರ ಮಾರುತ್ತಿದ್ದಾರೆ ಅಂತಾ ದಾಳಿ ಮಾಡಬೇಕಾಗಿ ತಿಳಿಸಿರುತ್ತಾರೆ. ನಂತರ ಕೂಡಲೇ ನಾನು ಮತ್ತು ಚಾಸಾ-4, ಚಾಸಾ-10ರವರೊಂದಿಗೆ ಸದರಿ ಜನರಲ ಸ್ಟೋರಗೆ ಹೋಗಿ ನೋಡಲಾಗಿ ಜಂಡುಬಾಂಬ ಕಂಪನಿಯವರು ಪರಿಶೀಲನೆ ಮಾಡಿ ಸದರಿ ಜಂಡುಬಾಂಬ ನಕಲಿ ಇದೆ ಎಂದು ಗುರುತಿಸಿರುತ್ತಾರೆ. ನಂತರ ಚಾಸಾ-10 ರವರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ಸದರಿ ನಕಲಿ ಜಂಡುಬಾಂಬ ಡಬ್ಬಿಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ನಾವೆಲ್ಲರೂ ಪೊಲೀಸ ಠಾಣೆಗೆ ಬಂದಿರುತ್ತೇವೆ. ಸದರಿ ಅಂಗಡಿ ಮಾಲೀಕರಿಗೆ ಕುಲಕುಂಷವಾಗಿ ವಿಚಾರಿಸಲಾಗಿ, ಸದರಿಯವರು ಎಲ್ಲಾ ಜಂಡುಬಾಂಬ ಡಬ್ಬಿಗಳನ್ನು ಬೇರೆಯವರು ತಂದುಕೊಟ್ಟಿರುತ್ತಾರೆ ನಾನು ಅವುಗಳನ್ನು ಮಾರಾಟ ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ವಿ.ಜೆ.ಎಮ್. ವಕೀಲರಿಂದ ಃ

ನಾನು ನನ್ನ ಹೇಳಿಕೆಯಲ್ಲಿಚಾಸಾ-10ರವರೊಂದಿಗೆ ದಾಳಿ ಮಾಡಲು ಹೋಗಿಲ್ಲ ಎಂದರೆ ಸರಿಯಲ್ಲ. ನಾವು ಅಂಗಡಿಗೆ ಭೇಟಿ ನೀಡಿದಾಗ ಆರೋಪಿತನು ಹಾಗೂ ಇತರ ಕೆಲಸಗಾರರು ಉಪಸ್ಥಿತಿ ಇದ್ದರು. ಆರೋಪಿತನು

ಅಂಗಡಿಯ ಮಾಲೀಕರು ಎಂದು ಪರಿಗಣಿಸಲು ತನಿಖಾಧಿಕಾರಿಗಳು ದಾಖಲೆ ಪಡೆದುಕೊಂಡಿರುತ್ತಾರೆ. ಆರೋಪಿತರ ಅಂಗಡಿಯಲ್ಲಿರುವ ಜಂಡುಬಾಂಬ ನಕಲಿ ಜಂಡುಬಾಂಬ ಆಗಿರುವ ಬಗ್ಗೆ ಸದರಿ ಜಂಡುಬಾಂಬ ಕಂಪನಿಯವರು ತಿಳಿಸಿರುತ್ತಾರೆ. ಸದರಿ ಕಂಪನಿದವರು ಜಂಡುಬಾಂಬ ಪರೀಕ್ಷೆ ಮಾಡಿರುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಎರಡು ಜಂಡುಬಾಂಬ ಬಾಟಲಿಗಳು ನೋಡಿದರೆ ಯಾವದು ಓರಿಜಿನಲ್ ಯಾವುದು ನಕಲಿ ಎಂದು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಎರಡು ಡಬ್ಬಿ ಬೇರೆ ಬೇರೆ ಇರುತ್ತವೆ ಎಂದು ನುಡಿಯುತ್ತಾರೆ. ಓರಿಜಿನಲ್ ಡಬ್ಬಿ ಕಂಪನಿಯವರು ತಂದು ಹಾಜರುಪಡಿಸಿರುತ್ತಾರೆ. ನಾನು ಆರೋಪಿತರ ಅಂಗಡಿಯಲ್ಲಿ ದಾಳಿ ಮಾಡಲು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಸಾಹೇಬರು ಮೇಲಿನ ಪ್ಯಾಕಿಂಗ್ ಹೊರತುಪಡಿಸಿ ಒಳಗಿರುವ ಅಂಶಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಓರಿಜಿನಲ್ ಹಾಗೂ ನಕಲಿ ಜಂಡುಬಾಂಬನಲ್ಲಿರುವ ಅಂಶಗಳು ಒಂದೇ ಆಗಿರುತ್ತವೆ ಎಂದರೆ ಸಾಕ್ಷಿ ಬೇರೆ ಬೇರೆ ಆಗಿರುತ್ತವೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಇವತ್ತು ನಾನು ನ್ಯಾಯಾಲಯದಲ್ಲಿ ಮುಖ್ಯವಿಚಾರಣೆಯಲ್ಲಿ ಹೇಳಿರುವ ವಿಷಯಗಳು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರು ವಿರುದ್ದ ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿಯ ನಕಲಿ ಹಾಗೂ ಓರಿಜಿನಲ್ ಆಗಲೀ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**